ಶ್ರೀ ವೈ. ಎಂ. ಚಂದ್ರಶೇಖರಯ್ಯ.– ಗ್ರಾಮಾಂತರ ಕೈಗಾರಿಕೆ ಸೊಸೈಟಿ ಪ್ರಾರಂಭವಾಗಿ ಎಷ್ಟು ವರ್ಷವಾಯಿತು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನುಮಾರು ನಾಲ್ಕು ವರ್ಷವಾಯಿತು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನಮ್ಮ ಜಿಲ್ಲೆಯಲ್ಲಿ ಗ್ರಾಮ ಕೈಗಾರಿಕಾ ಸೊಸೈಟಿಯಾಗಿ ಎಷ್ಟು ವರ್ಷವಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು ವರ್ಷವಾಗಿರಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬೈಲಾ ತಯಾರುಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೋ-ಆಪರೇಟಿವ್ ಸೊಸೈಟಿಗಳಿಗೆ ಬೈಲಾ ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ವಸೂಲುಮಾಡಿರುವ ರೂಪಾಯಿ Rs. 1,11,335-13-0 ಎಲ್ಲಿ ಇದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೊಸೈಟಿ ಕ್ರೆಡಿಟ್‌ನಲ್ಲಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇಷ್ಟು ಹಣ ವಸೂಲು ಮಾಡಿರುವಾಗ ಕಡೂರಿಗೆ 2,750 ರೂಪಾಯಿಗಳನ್ನು ಮಾತ್ರ ಹಂಚಲ್ಪಟ್ಟಿದೆ. ಬಾಕಿ ಹಣ ಏನಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—62,825 ಚಿಲ್ಲರೆ ರೂಪಾಯಿ ಮಂಜೂರಾಗಿ 8,550 ರೂಪಾಯಿಗಳನ್ನು ಹಂಚಿದೆ. ಬಾಕಿ ಹಣ ಕ್ರೆಡಿಟ್ಟಿನಲ್ಲಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಒಂದು ಲಕ್ಷ ಚಿಲ್ಲರೆ ವಸೂಲುಮಾಡಿ ಬ್ಯಾಂಕಿನಲ್ಲಿಟ್ಟರೆ ರೈತರಿಗೇನು ಪ್ರಯೋಜನವಾದ ಹಾಗಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣವಿದೆಯೆಂದು ಸಿಕ್ಕಾಪಟ್ಟೆ ಕೊಡುವುದಕ್ಕಾಗುವುದಿಲ್ಲ. ಕ್ರಮವರಿತು ಯಾರಿಗೆ ಕೊಡಬೇಕು, ಯಾರಿಗೆ ಕೊಡಬಾರದು ಎಂದು ನೋಡಿ, ಆಧಾರವಾಗಿ ಕೊಟ್ಟಿರುವ ಜಮೀನನ್ನು ನೋಡಿ ಹಣ ಕೊಡಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎರಡುನೂರಿವರ ಜನ ಸಾಲ ಕೇಳಿದ್ದಕ್ಕೆ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಬಹಳ ಕಡಮೆ ಜನರಿಗೆ ಸಾಲಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—162 ಜನ ಕೇಳಿದ್ದರು. ಚಿಕ್ಕಮಗಳೂರು ತಾಲ್ಲೂಕಿನಲ್ಲಿ 38 ಜನಗಳಿಗೆ ಮಂಜೂರಾಗಿದ್ದು 12,850 ರೂಪಾಯಿಗಳಲ್ಲಿ 3,800 ರೂಪಾಯಿಗಳನ್ನು ಕೊಟ್ಟಿದೆ, ಬಾಕಿಯವರು ತೆಗೆದುಕೊಂಡಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಸೊಸೈಟಿ ಹಾಕಿಕೊಂಡಿರುವ ಕಾರ್ಯಕ್ರಮವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಲೋಕಲ್ ರಿಕಾರ್ಡ್ ಬಲ್ಡಪ್‌ಮಾಡಿ ಕಳುಹಿಸಿ ಮಂಜೂರಾತಿ ಪಡೆದು ಹಣ ವಿಲೇ ಮಾಡುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸೊಸೈಟಿಗಳಿಗೆ ಸಾಲ ಕೊಡುವ ಉದ್ದೇಶ ಮಾತ್ರ ಎಲ್ಲಿದೆಯೋ ಅಥವಾ ಬೇರೆ ಉದ್ದೇಶವೂ ಇದೆಯೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರೆ ಉದ್ದೇಶವೂ ಇದೆ. ಸಾರ್ವಜನಿಕರು ಸೊಸೈಟಿ ಜೊತೆಗೆ ಸೇರಿ ಉದ್ದೇಶ ಸಾರ್ಥಕಪಡಿಸುವಂತೆ ಕಲಸಮಾಡಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸರ್ಕಾರದಿಂದ ನಿಗದಿಯಾದ ಬೈಲಾ ಬಂದಿಲ್ಲವೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ನಡೆಸುವವರು ಸಾಲ ಕೇಳಿದರೆ ಜಮೀನಿರಬೇಕೆಂದು ಹೇಳುತ್ತಾರೆ. ಜಮೀನಿಲ್ಲದಿರುವವರಿಗೂ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊಡುವುದಕ್ಕೆ ಆಜ್ಞೆಮಾಡಿದೆ.

Road Improvements in the First and Second Five-Year Plans.

Q.—295. **Sri V. M. MASCARENHAS** (St. John's Hill).—

Will the Government be pleased to state :—

(*a*) the number of miles of road surface (i) concreted, (ii) asphalted, and (iii) metalled, during the First Five-Year Plan;

(*b*) the number under each head contemplated during the Second Five-Year Plan ?

A.—**Sri H. M. CHANNABASAPPA** (Minister for Industries).—

		Miles.
(*a*) (1) Concreted	...	116-2
(2) Asphalted	...	467-0
(3) Metalled-Not ascertainable.		

Note—The figures are up to the end of December 1955.

		Miles.
(*b*) Concreting	...	60
Asphalting	...	800

Sri V. M. MASCARENHAS.—Is it the policy of Government to prefer asphalting the roads to cement concrete ?

***Sri H. M. CHANNABASAPPA.**—I have already made a statement to that effect.

Sri V. M. MASCARENHAS.—May I know the cost for asphalting one mile of road ?

Sri H. M. CHANNABASAPPA.—It would be of the order of 20 to 25 thousand.

Sri V. M. MASCARENHAS.—Have Government provided the necessary funds of one crore and 60 lakhs for this work ?

Sri H. M. CHANNABASAPPA. —Yes; 200 lakhs has been provided.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಕಾಂಕ್ರೀಟ್‌ಮಾಡಿರುವ 116 ಚಿಲ್ಲರೆ ಮೈಲಿ ರಸ್ತೆಗೆ ಪ್ರತಿವರ್ಷ ಮೈಂಟೆನೆನ್ಸ್ ಥಾರ್ಜ್ ಕೊಡುವುದೇಕೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾಂಕ್ರೀಟ್ ರಸ್ತೆಯ ಅಕ್ಕಪಕ್ಕಗಳನ್ನು ಪೆರ್ಫೆಕ್ಟ್ ಮಾಡುವುದಕ್ಕೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಾಂಕ್ರೀಟ್ ಮಾಡುವುದಕ್ಕೆ ಮುಂಚೆ ಒಂದು ಮೈಲಿಗೆಷ್ಟು ಮೈಂಟೆನೆನ್ಸ್ ಥಾರ್ಜ್ ಕೊಡುತ್ತಿತ್ತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೊಂದು ಕಡೆ ಒಂದೊಂದು ಮೈಲೇಜ್ ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಕಾಂಕ್ರೀಟ್‌ಮಾಡಿರುವ ರಸ್ತೆಗಳ ಪೆರ್ಫೆಟನೆನ್ಸಿಗೆ ಹಿಂದೆ ಕೊಡುತ್ತಿದ್ದಷ್ಟು ಗ್ರಾಂಟನ್ನೇ ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಾಂಕ್ರೀಟ್ ಮಾಡುವುದಕ್ಕೆ ಮುಂಚೆ ಕೊಡುತ್ತಿದ್ದ ಹಣವನ್ನೇ ಈಗ ಕಾಂಕ್ರೀಟ್ ಮಾಡಿದಮೇಲೂ ಸಹ ಕೊಡುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ 14-15 ಅಡಿ ರಸ್ತೆಗೆ ಕಾಂಕ್ರೀಟ್ ಮಾಡುತ್ತಾರೆ. ಅದರ ಅಕ್ಕಪಕ್ಕದ ಸುಮಾರು 8 ಅಡಿ ರಸ್ತೆ ರಿಪೇರಿ ಮಾಡಲು ಹಣಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ರಸ್ತೆಗೆ ಕಾಂಕ್ರೀಟ್‌ಮಾಡಿದಮೇಲೆ ಆ ಕಡೆ ಈ ಕಡೆ 3-4 ಅಡಿ ಕಾಂಕ್ರೀಟ್‌ಮಾಡದೆ ಬಿಟ್ಟಿರುವ ರಸ್ತೆಯ ಮೈಂಟೆನೆನ್ಸ್‌ಗೆ ಮೊದಲನಷ್ಟೇ ಖರ್ಚು ಮಾಡುವುದು ಸೂಕ್ತವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏನೂ ಕೆಲಸವಿಲ್ಲದೆ ಖರ್ಚು ಮಾಡುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಜಲ್ಲಿ ಹಾಕುವುದನ್ನು ಯೋಚನೆ ಮಾಡಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಉತ್ತರದಲ್ಲಿ ಅದನ್ನು ತೋರಿಸಿಲ್ಲ. ಎಲ್ಲಿ ಜಲ್ಲಿ ಹಾಕಬೇಕೆಂದಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೊಸ ರಸ್ತೆಗಳಿಗೆ, ಜಲ್ಲಿ ಹಾಕುವುದು, ಡೀವಿಯೇಷ್ಟ್ ರಸ್ತೆಗೆ ಹಾಕುವುದು, ಇರುವ ರಸ್ತೆಗಳಿಗೆ ಪುನಃ ಹಾಕುವುದು ಹೀಗೆಲ್ಲಾ ಇದೆ. ಕಾರಾವಕಾಶವಿಲ್ಲದೆ ಆ ಸಮಾಚಾರ ಒದಗಿಸಲಲ್ಲ.

Mr. SPEAKER.—Question No. 170. The Hon'ble Minister for Law is not here now. Who will answer this question ?

Sri Mulka GOVINDA REDDY.—It may be taken up to-morrow.

Mr. SPEAKER.—I have no objection. To-morrow it will be taken up.

Question No. 186 by Sri P. M. Swamidurai. Who will answer this question ?

Sri H. M. CHANNABASAPPA.—I will answer.

Schedule Castes Gazetted Officers.

Q. —186. Sri P. M. SWAMIDURAI (K.G.F.—Scheduled Castes).—

Will the Government be pleased to state :—

(*a*) the number of Scheduled Caste gazetted officers in the State ;

(*b*) the number of Scheduled Caste I.A.S. and I.P.S. Officers in the State ?

A.—Sri H. M. CHANNABASAPPA (Minister for Industries) [On behalf of SRI K. HANUMANTHAIYA (Chief Minister)].—

(*a*) 43.
(*b*) Nil.

Sri P. M. SWAMIDURAI.—I want to know whether the Government have recommended the cases of any of the Scheduled Caste officers to the Central Government for I.A.S. and I.P.S. cadres ?

Sri H. M. CHANNABASAPPA.—I would like to have notice.

Sri P. M. SWAMIDURAI.—Is it not a fact that the Central Government is going to recruit some more to the I.A.S. and I.P.S. cadres ?

Sri H. M. CHANNABASAPPA.—We are not aware.

Sri P. M. SWAMIDURAI.—Is it fair not to include Scheduled Caste people in the cadres of I.A.S. and I.P.S. ?

Sri H. M. CHANNABASAPPA.—The selection to I.A.S. and I.P.S. depends upon so many considerations and if members of the Scheduled Castes and Tribes fulfil those requirements, we will welcome it.

Sri P. M. SWAMIDURAI.—Is it not a fact that out of 43 gazetted officers belonging to the Scheduled Castes, many are suitable for these I.A.S. and I.P.S. cadres ?

Sri H. M. CHANNABASAPPA.—That is a matter of opinion.